# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**Spl. CASE: 41/2023**

**ಫ್ರಾ.ಸಾ. 04**
**ದೋ.ಸಾ. 04**

| | | |
|---|---|---|
| ಸಾಕ್ಷಿಯ ಹೆಸರು | : | ಗಣಪತಿ ಶಾಸ್ತ್ರಿ |
| ತಂದೆಯ ಹೆಸರು | : | ಗಜಾನನ ಶಾಸ್ತ್ರಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ತಹಸೀಲ್ದಾರ್, ಕಂದಾಯ ಆಯುಕ್ತಾಲಯ, ಬೆಂಗಳೂರು |
| ವಾಸ | : | ಯಲಹಂಕ |

**ದಿನಾಂಕ 21.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿ.24.04.2021 ರಿಂದ 28.07.2023 ರವರೆಗೆ ಚಿಕ್ಕಬಳ್ಳಾಪುರದ ತಾಲ್ಲೂಕು ಕಚೇರಿಯಲ್ಲಿ ತಹಸೀಲ್ದಾರ್ ಕಾರ್ಯ ನಿರ್ವಹಿಸುತ್ತಿದ್ದೆನು.

2. ದಿನಾಂಕ:20.09.2022 ರಂದು ನಾನು ಕರ್ತವ್ಯದಲ್ಲಿರುವಾಗ ಫ್ರಾಸಾ-1 ರವರು ಬೆಃ 11.30 ರ ಸಮಯದಲ್ಲಿ ಗಾಂಜಾ ವಸ್ತುವನ್ನು ಜಪ್ತು ಪಡಿಸುವ ಕಾಲಕ್ಕೆ ಗೆಜೆಟೆಡ್ ಅಧಿಕಾರಿಯಾಗಿ ಬರಬೇಕೆಂದು ಲಿಖಿತ ಮನವಿ ಸಲ್ಲಿಸಿರುತ್ತಾರೆ. ಸಾಕ್ಷಿಯು ಸದರಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಕಚೇರಿಯ ಸೀಲ್ ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

3. ಅದರಂತೆ ನಾನು ಘಟನಾ ಸ್ಥಳಕ್ಕೆ ಪೋಲೀಸರೊಂದಿಗೆ ನನ್ನ ಇಲಾಖಾ ವಾಹನದಲ್ಲಿ ಸುಮಾರು 12.15 ರ ವೇಳೆಗೆ ಹೋಗಿರುತ್ತೇನೆ. ಅಲ್ಲಿಗೆ ಹೋದಾಗ ಒಂದು ಶೆಡ್ ತೋಟದ ಜಮೀನಿನಲ್ಲಿ ಇದ್ದು, ಆ ಶೆಡ್ಡಿನ ಬಳಿ ನ್ಯಾಯಾಲಯದ ಮುಂದಿರುವ ಆರೋಪಿ ವೇಣುಗೋಪಾಲ ಇದ್ದನು. ಆಗ ಆತನನ್ನು ಉದ್ದೇಶಿಸಿ ನಿಮ್ಮ ತೋಟದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದಾಗಿ ನಮಗೆ ಮಾಹಿತಿ ಬಂದಿದ್ದು, ಪರಿಶೀಲಿಸಬೇಕು ಎಂದು ಹೇಳಿದೆವು.

4. ನಂತರ ಆರೋಪಿಯನ್ನು ಉದ್ದೇಶಿಸಿ ನಾನು ಗೆಜೆಟೆಡ್ ಅಧಿಕಾರಿಯಾಗಿದ್ದು, ನಿಮ್ಮ ತೋಟವನ್ನು ಶೋಧನೆಯನ್ನು ಮಾಡಬಹುದೇ ಎಂದು ವಿಚಾರಿಸಿಲಾಗಿ ಕೇಳಿದಾಗ ಆತ ಒಪ್ಪಿ ಕೊಂಡಿದ್ದು, ನಂತರ ಆತನೊಂದಿಗೆ ಆತನ ಜಮೀನನ್ನು ಪರಿಶೀಲಿಸಿದಾಗ ರೋಜಾ ಮತ್ತು ಕನಕಾಂಬರ ಗಿಡದ ಜೊತೆಗೆ 5 ಗಾಂಜಾ ಗಿಡಗಳನ್ನು ಬೆಳೆದಿರುವುದು ಕಂಡು ಬಂತು. ಅವುಗಳು 4-6 ಅಡಿ ಎತ್ತರ ಬೆಳೆದಿರುವುದು ಕಂಡು ಬಂತು. ಅವುಗಳನ್ನು ಬೇರು ಸಮೇತ ಕಿತ್ತು ಮಣ್ಣೆಲ್ಲಾ ಬೇರ್ಪಡಿಸಿ ಒಂದು ಪ್ಲಾಸ್ಟಿಕ್ ಚೀಲಕ್ಕೆ ಹಾಕಿ ತೂಕ ಮಾಡಿ ನೋಡಲಾಗಿ 10 ಕೆ.ಜಿ, 130 ಗ್ರಾಂ ಇದ್ದು, ಅದರ ಅಂದಾಜು ಬೆಲೆ ಸುಮಾರು 3 ಲಕ್ಷ ಎಂಬ ಅಭಿಪ್ರಾಯ ಪಟ್ಟು ಸದರಿ ಗಿಡಗಳನ್ನು ಮುಂದಿನ ಕ್ರಮಕ್ಕಾಗಿ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಮೂತಿಯನ್ನು ದಾರದಲ್ಲಿ ಕಟ್ಟಿ ಸದರಿ ಚೀಲಕ್ಕೆ **ಎನ್** ಎಂಬ ಅಕ್ಷರದಿಂದ ಸೀಲ್ ಮಾಡಿ, ಜಪ್ತು ಪಡಿಸಲಾಯಿತು.

5. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಬೆಃ 12.30 ರಿಂದ 14.30 ರವರೆಗೆ ಜರುಗಿಸಿ , ನಾನು ಪಂಚರು ಅಧಿಕಾರಿಗಳು ಎಲ್ಲರೂ ಸಹಿ ಮಾಡಿರುತ್ತೇವೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಲಗೇ ನಿಪಿ-5 ಎಂದು ಗುರುತಿಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-5(ಇ)** ಎಂದು

ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿದ್ದು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ–6 ರಲ್ಲಿರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

6. ತನಿಖಾ ಕಾಲದಲ್ಲಿ ತನಿಖಾಧಿಕಾರಿ ಸದರಿ ಜಮಿನಿನ ದಾಖಲೆಗಳನ್ನು ಕೇಳಿದ್ದು, ಅವುಗಳನ್ನು ಸಂಬಂಧಿಸಿದ ಆರ್ ಐ ಮತ್ತು ವಿ. ಎ ರವರ ಮೂಲಕ ಸಂಗ್ರಹಿಸಿ ಒಂದು ವರದಿಯೊಂದಿಗೆ ತನಿಖಾಧಿರಿಗೆ ಸಲ್ಲಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು **ನಿಪಿ–10** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–10(ಎ)** ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ.ಎಸ್ ರವರಿಂದಃ**

7. ನಾನು ದಿ.20.09.2022 ರಂದು ಈ ಪ್ರಕರಣದ ಆರೋಪಿಯನ್ನು ಮಃ12.15 ರ ಸಮಾರಿಗೆ ಆರೋಪಿಗೆ ಸೇರಿದ ಜಮೀನಿನಲ್ಲಿರುವ ಶೆಡ್ಡಿನ ಬಳಿ ನೋಡಿರುತ್ತೇನೆ. ನಿಪಿ–6 ರ ಫೋಟದಲ್ಲಿ ಸದರಿ ಶೆಡ್ ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಆರೋಪಿಯನ್ನು ಉದ್ದೇಶಿಸಿ ಜಮೀನಿನ ಪರಿಶೀಲನೆ ಮಾಡಲು ವಿಚಾರಣೆ ಮಾಡಿದ ಕುರಿತು ಲಿಖಿತ ಬರವಣಿಗೆ ಮಾಡಿಕೊಂಡಿರುವುದಿಲ್ಲ. ಘಟನಾ ಸ್ಥಳ ನಮ್ಮ ಕಚೇರಿಯಿಂದ ಸಮಾರು 2 ಕಿ.ಮೀ ಅಂತರದಲ್ಲಿರಬಹುದು. ನಂದಿಗ್ರಾಮದ ನಾಡಕಚೇರಿ ಸುಮಾರು 1 ರಿಂದ 1.30 ಕಿ.ಮೀ ಅಂತರದಲ್ಲಿರಬಹುದು. ಆ ಕಾಲಕ್ಕೆ ನನ್ನ ಬಳಿ ಮೊಬೈಲ್ ಇತ್ತು. ಘಟನಾ ಸ್ಥಳದಲ್ಲಿ ನಾನು ಸುಮಾರು 2 ರಿಂದ 2.30 ಗಂಟೆ ಸಮಯವಿದ್ದೆ. ಆ ಸಮಯದಲ್ಲಿ ಜಮೀನಿನ ರವೆನ್ಯೂ ದಾಖಲೆಗಳನ್ನು ನಿಮ್ಮ ಸಿಬ್ಬಂದಿಗಳ ಮೂಲಕ ಸಂಗ್ರಹಿಸಿ, ಪರಿಶೀಲಿಸಲು ಪ್ರಯತ್ನಿಸಿದ್ದೀರಾ ಎಂಬ ಪ್ರಶ್ನೆಗೆ

ಸಾಕ್ಷಿಯು ಸಿಬ್ಬಂದಿ ಮೂಲಕ ದಾಖಲೆಗಳನ್ನು ತರಿಸಿ ಪರಿಶೀಲಿಸಿಲ್ಲ, ಆದರೆ ನನ್ನ ಮೊಬೈಲ್ ನಲ್ಲಿ ರೆವೆನ್ಯೂ ದಾಖಲೆಗಳನ್ನು ಪರಿಶೀಲಿಸಲು ಇರುವ ಸರ್ಕಾರಿ ದಿಶಾಂಕ್ ಆ್ಯಪ್ ನಲ್ಲಿ ಪರಿಶೀಲಿಸಿದ್ದು, ಆ ಸದರಿ ಜಮೀನು ಸರ್ವೆ ನಂ .160 ರಲ್ಲಿ ಇರುವುದು ಕಂಡು ಬಂದಿತ್ತು. ಸದರಿ ಆ್ಯಪ್ ನಲ್ಲಿ RTC ಕಾಣಿಸುವುದಿಲ್ಲ ಆದರೆ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ, ಮಾಲೀಕತ್ವ, ಅನುಭವದಾರ ಮಾಹಿತಿಗಳು ಕಂಡು ಬರುತ್ತವೆ. ನಾನು ಪರಿಶೀಲನೆ ಮಾಡಿದಾಗ ಆರೋಪಿಯ ಹೆಸರಿನಲ್ಲಿ ಜಮೀನು ಇತ್ತಾ ಎಂದರೆ ಸಾಕ್ಷಿಯು ಜಮೀನು ಆರೋಪಿಯ ತಂದೆ ಹೆಸರಿನಲ್ಲಿ ಇತ್ತು ಎನ್ನುತ್ತಾರೆ. ಜಮೀನು ಆರೋಪಿಯ ತಂದೆ ಹೆಸರಿನಲ್ಲಿ ಇರುವ ಬಗ್ಗೆ ನನ್ನ ಸ್ಥಳೀಯ ಸಿಬ್ಬಂದಿ ತಿಳಿಸಿದ್ದು, ಅವರ ಹೆಸರು ಈಗ ನನಗೆ ನೆನಪಿಲ್ಲ.

8. ಸರ್ವೆ ನಂ.160 ರ RTC ಯನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿಯು ಆ ಕಾಲಕ್ಕೆ ದಿಶಾಂಕ್ ಆ್ಯಪ್ ಅನ್ನು ಹೊರತುಪಡಿಸಿ RTC ದಾಖಲೆಯನ್ನು ಪರಿಶೀಲಿಸಿರುವುದಿಲ್ಲ. RTC ಅನ್ನು ಆನ್ ಲೈನ್ ನಲ್ಲಿ ಪರಿಶೀಲಿಸಬಹುದು ಎಂದರೆ ಸರಿ. ಸರ್ವೆ ನಂ.160 ರ RTC ಅನ್ನು ಪರಿಶೀಲಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಅದರ ಅಗತ್ಯ ಕಂಡು ಬಾರದ ಕಾರಣ ಪರಿಶೀಲಿಸಿಲ್ಲ ಎನ್ನುತ್ತಾರೆ. ಸರ್ವೆ ನಂ.160 ರಲ್ಲಿ ಸುಮಾರು 15 ಹಿಸ್ಸಾಗಳಾಗಿ ವಿಂಗಡಿಸಲಾಗಿದೆ ಎಂದರೆ ಇರಬಹುದು. ಈಗ ನನಗೆ ತೋರಿಸಿದ RTC ಗಳು ಸರ್ವೆ ನಂ.160 ಕ್ಕೆ ಸಂಬಂಧಿಸಿದಂತೆ ನಮ್ಮ ಇಲಾಖೆ ಸಿದ್ಧಪಡಿಸಿರುವುದು ಎಂದರೆ ಸಾಕ್ಷಿಯು ಸದರಿ RTC ಗಳನ್ನು ಪರಿಶೀಲಿಸಿ, ಹಿಸ್ಸಾ ನಂ.1, 4, 5 ಮತ್ತು 9 ರ RTC ಗಳು, ನಾವು ಆ ದಿನ ಪರಿಶೀಲನೆ ಒಳಪಡಿಸಿದ ಕಾಲಕ್ಕೆ ಸಂಬಂಧಿಸಿದವುಗಳು ಎಂದು ಒಪ್ಪಿಕೊಂಡ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಡಿ–1** ಎಂದು ಗುರುತಿಸಲಾಯಿತು.

9. ಸರ್ವೆ ನಂ.160 ರಲ್ಲಿ ಹಲವಾರು ಹಿಸ್ಸೆಗಳು ಇರುವ ಬಗ್ಗೆ ಆ ಕಾಲಕ್ಕೆ ನನಗೆ ತಿಳಿದಿತ್ತು ಎಂದರೆ ಸರಿ. ಸರ್ವೆ ನಂ .160 ರ ಜಮೀನು ಹಿಸ್ಸಾ ಗಳಾಗಿ ಬದಲಾವಣೆ

ಹೊಂದಿದ ನಂತರ ಮೂಲ ಸರ್ವೆ ನಂ.160 ರಲ್ಲಿ RTC ಬರುವುದಿಲ್ಲ ಎಂದರೆ ಸರಿ. ಸರ್ವೆ ನಂ.160 ರ ಹಿಸ್ಸಾಗಳಲ್ಲಿ ಜಮೀನು ಸಂಬಂಧಿಸಿದ ಮಾಲೀಕರ ಹೆಸರಿಗೆ ವರ್ಗಾವಣೆಗೊಂಡಿದೆ ಎಂದರೆ ಸರಿ. ಮಹಜರ್ ಮಾಡುವ ಕಾಲಕ್ಕೆ ಮಹಜರ್ ಮಾಡಿದ ಜಮೀನು ಯಾವ ಹಿಸ್ಸೆಯಲ್ಲಿ ಬರುತ್ತದೆಂದು ನಮೂದಿಸಿಲ್ಲ ಎಂದರೆ ಸರಿ. ಅಸ್ತಿತ್ವದಲ್ಲಿ ಇಲ್ಲದ ಸರ್ವೆ ನಂಬರ್ ಅನ್ನು ಪಂಚನಾಮೆಯಲ್ಲಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಗಾಂಜಾ ಗಿಡ ಬೆಳೆದಿದ್ದ ಜಮೀನು ಯಾವ ಸರ್ವೆ ನಂಬರ್ ನ ನಿರ್ದಿಷ್ಟ ಹಿಸ್ಸಾದಲ್ಲಿ ಬರುತ್ತದೆ ಎಂದು ರೆವೆನ್ಯೂ ದಾಖಲೆಗಳನ್ನು ಪರಿಶೀಲಿಸಿ, ಪಂಚನಾಮೆಯಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದರ ಅಗತ್ಯ ಇರಲಿಲ್ಲ ಎನ್ನುತ್ತಾರೆ.

10. ಪಂಚನಾಮೆ ಹಾಗೂ ನನ್ನ ಹೇಳಿಕೆಯಲ್ಲಿ ಇರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಪ್ರಶ್ನಿತ ಗಂಜಾ ಗಿಡದ ಕಾಂಡ, ಬೇರು, ಎಲೆ, ಬಗ್ಗೆ ನಿರ್ದಿಷ್ಟವಾಗಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ–5 ರ ಪಂಚನಾಮೆಯಲ್ಲಿಯೂ ಹೇಳಿಲ್ಲ ಎಂದರೆ ಸಾಕ್ಷಿಯು 5 ಗಿಡಗಳನ್ನು ಕಿತ್ತು ತೂಕ ಮಾಡಿರುವ ಬಗ್ಗೆ ನಮೂದಿಸಿರುವುದಾಗಿ ನುಡಿಯುತ್ತಾರೆ. ನಿಪಿ–6 ರ ಫೋಟೋಗಳಲ್ಲಿ ಕಂಡು ಬರುವ ಗಾಂಜಾ ಗಿಡಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಗಾಂಜಾ ಗಿಡಗಳನ್ನು ನನ್ನ ಸಮಕ್ಷಮ ತೂಕ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ **"ನಂತರ ಪೊಲೀಸ್ ಸಬ್ ಇನ್ಸ್ ಪೆಕ್ಟರ್ ರವರು ತನ್ನ ಇಬ್ಬರು ಪೊಲೀಸ್ ಸಿಬ್ಬಂದಿಗಳನ್ನು ಸದರಿ ಜಮೀನಿನ ಮಾಲೀಕರನ್ನು ಪತ್ತೆ ಮಾಡಿಕೊಂಡು ಬಂದು ಹಾಜರು ಪಡಿಸಲು ನೇಮಿಸಿ ಕಳುಹಿಸಿದ್ದು"** ಎಂದು ನಮೂದಿದೆ ಎಂದರೆ ಸರಿ. ಆದ್ದರಿಂದ ನಾನು ಪೊಲೀಸರೊಂದಿಗೆ ಸ್ಥಳಕ್ಕೆ ಹೋದಾಗ ಆರೋಪಿಯು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ.

11. ಆ ನಂತರ ಸಿಬ್ಬಂದಿಗಳು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಜಮೀನಿನ ಬಳಿ ಕರೆದುಕೊಂಡು ಬಂದಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ

ನಮೂದಿದೆ ಎಂದರೆ ಸರಿ. ನಮ್ಮ ಮುಂದೆ ಹಾಜರು ಪಡಿಸಿದ ವ್ಯಕ್ತಿ ವೇಣುಗೋಪಾಲ ಎಂದು ಆತನ ಪರಿಚಯ ಮಾಡಿಕೊಂಡಿದ್ದು, ಆತನ ಹೆಸರಿನಲ್ಲಿ ರೆವೆನ್ಯೂ ದಖಲೆಗಳು ಇರುವ ಬಗ್ಗೆ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿಯು, ಜಮೀನು ಆತನ ತಂದೆ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ಆ ಕಾಲಕ್ಕೆ ಆರೋಪಿಯನ್ನು ಹೊರತುಪಡಿಸಿ ಅಕ್ಕಪಕ್ಕದ ಜಮೀನಿನ ಮಾಲೀಕರನ್ನು ವಿಚಾರಣೆ ಮಾಡಿ, ಗಾಂಜಾ ಗಿಡ ಬೆಳೆದಿದ್ದ ಜಮೀನಿನ ಸಾಗುವಳಿಯನ್ನು ಯಾರು ಮಾಡಿರುತ್ತಾರೆ ಎಂದು ವಿಚಾರಣೆ ಮಾಡಿಲ್ಲ ಎಂದರೆ ಸರಿ.

12. ನಿಪಿ -6 ರ ಫೋಟೋಗಳಲ್ಲಿ ಕಂಡು ಬರುವ ಜಮೀನಿಗೆ drip irrigation pipeline ಅನ್ನು ಅಳವಡಿಸಿರುವುದು ಕಂಡು ಬರುತ್ತದೆ ಎಂದರೆ ಸರಿ. ಸದರಿ drip irrigation pipeline ಅನ್ನು ಯಾವ ಬೋರ್ ವೆಲ್ ನಿಂದ ಅಳವಡಿಸಲಾಗಿದೆ ಮತ್ತು ಬೋರ್ ವೆಲ್ ಯಾವ ಸರ್ವೆ ನಂಬರ್ ಜಮೀನಿನಲ್ಲಿದೆ ಎಂದು ನಾನು ಪರಿಶೀಲಿಸಿಲ್ಲ. ಪಂಚನಾಮೆಯಲ್ಲಿ ಎಲ್ಲಿಯೂ ಸಹ ಜಮೀನಿಗೆ ಯಾವ ಹಿಸ್ಸೆಯಲ್ಲಿರುವ ಬೋರ್ ವೇಲ್ ನಿಂದ drip irrigation pipeline ಅನ್ನು ಅಳವಡಿಸಿ ವ್ಯವಸಾಯ ಮಾಡಿದ ಬಗ್ಗೆ ನಮೂದಿಲ್ಲ ಎಂದರೆ ಸರಿ. ನಿಪಿ-6 ರ ಫೋಟೋಗಳಲ್ಲಿ ಗಾಂಜಾ ಗಿಡಗಳನ್ನು ಕಿತ್ತು ತೂಕ ಮಾಡುತ್ತಿರುವ ಬಗ್ಗೆ ಯಾವುದೇ ನಿಶಾನೆಗಳು ಕಂಡು ಬರುವುದಿಲ್ಲ ಎಂದರೆ ಸರಿ.

13. ನಾನು ತನಿಖಾಧಿಕಾರಿಗೆ ಹಾಜರು ಪಡಿಸಿರುವ ರೆವೆನ್ಯೂ ದಾಖಲೆಗಳಲ್ಲಿ ಸರ್ವೆ ನಂ.160/4 ರ ಹಿಸ್ಸೆ ಜಮೀನಿಗೆ ಸಂಬಂಧಿಸಿದ ಸ್ಕೆಚ್ ಅನ್ನು ಹಾಜರು ಪಡಿಸಿರುವುದಿಲ್ಲ. ಸರ್ವೆ ನಂ.160/4 ರ ಹಿಸ್ಸೆ ಜಮೀನಿಗೆ ಸಂಬಂಧಿಸಿದಂತೆ ಸದರಿ ಸರ್ವೆ ನಂಬರ್ ಪಂಚನಾಮೆಯಲ್ಲಾಗಲೀ ಅಥವಾ ನನ್ನ ಹೇಳಿಕೆಯಲ್ಲಾಗಲೀ ಕಂಡು ಬರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಗೆಜೆಟೆಡ್ ಅಧಿಕಾರಿಯಾಗಿ ಸ್ಥಳಕ್ಕೆ ಹೋಗಿಲ್ಲ ಹಾಗೂ ನಿಪಿ -5 ರ ಪಂಚನಾಮೆ ಕಾಲದಲ್ಲಿ ನಾನು ಭಾಗವಹಿಸಿಲ್ಲ ಎಂದರೆ

ಸರಿಯಲ್ಲ. ಆರೋಪಿಯನ್ನು ಈ ದಿನ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.